**ದಿನಾಂಕಃ 27.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ- 1ನೇ ಪ್ರತಿವಾದಿ ಪರ ಶ್ರೀ ಸಿ.ಎಲ್.ಎಸ್. ವಕೀಲರಿಂದ**

1) ನಾನು ಪದವಿಯನ್ನು ಅರ್ಧಕ್ಕೆ ನಿಲ್ಲಿಸಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ಸದರಿ ದಾವೆಯನ್ನು ವಿಭಾಗ ಕೋರಿ ಸಲ್ಲಿಸಿದ್ದೇವೆ. ನಮ್ಮ ತಂದೆ ನ್ಯಾಯಾಲಯದಲ್ಲಿ ಸಲ್ಲಿಸಿರುವ ಪ್ರಮಾಣ ಪತ್ರ ಹಾಗೂ ಅವರು ನುಡಿದಿರುವ ಸಾಕ್ಷಿ ಬಗ್ಗೆ ತಿಳಿದುಕೊಂಡಿರುತ್ತೇನೆ. ನಮ್ಮ ತಂದೆ ಅಡ್ಡ ವಿಚಾರಣೆ ವೇಳೆ ನುಡಿದಿರುವ ಸಾಕ್ಷಿ ಸಹ ಗೊತ್ತು. ಆ ಸಮಯದಲ್ಲಿ ನನ್ನ ತಂದೆ ಮಾನಸಿಕ ಅಸ್ವಸ್ಥರಾಗಿದ್ದು ಈ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಿಮ್ಮ ತಂದೆ ಸಾಕ್ಷಿ ನುಡಿಯುವ ಸಂದರ್ಭದಲ್ಲಿ ಮಾನಸಿಕ ಅಸ್ವಸ್ಥ ಎಂದು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

2) ನಮ್ಮ ಮುತ್ತಾತನ ಹೆಸರು ಸಿದ್ದಯ್ಯ ಉರುಫ್ ಮರಿಸಿದ್ದಯ್ಯ. ಸದರಿಯವರಿಗೆ ನಮ್ಮ ತಾತ ಸಿದ್ದಯ್ಯ ಮತ್ತು 1ನೇ ಪ್ರತಿವಾದಿ ಮಕ್ಕಳು ಎಂದರೆ ಸರಿ. 1ನೇ ಪ್ರತಿವಾದಿಗೆ ಸಿದ್ದಮ್ಮ ಹೆಂಡತಿ, ಸಂಜೀವಮ್ಮ, ಹನುವಂತ, ಮುದ್ದಯ್ಯ, ಪಾರ್ವತಮ್ಮ ಮತ್ತು ಕೆಂಪರಾಜು ಎಂಬ ಮಕ್ಕಳು ಎಂದರೆ ಸರಿ. ಕೆಂಪರಾಜುರವರು 10-15 ವರ್ಷಗಳ ಹಿಂದೆಯೇ ಮೃತಪಟ್ಟಿರುತ್ತಾರೆ. ಸದರಿಯವರಿಗೆ ಎರಡು ವಿವಾಹವಾಗಿದ್ದು ಅವರಿಗೆ ಮಕ್ಕಳು ಇರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಕೆಂಪರಾಜು ರವರ ಪತ್ನಿಯರನ್ನು ಮತ್ತು ಪಾರ್ವತಮ್ಮರವರನ್ನು ಪಕ್ಷಗಾರರನ್ನಾಗಿ ಮಾಡಿದ್ದೀರಾ ಎಂದರೆ ಸಾಕ್ಷಿ ಕೆಂಪರಾಜು ರವರು ಪತ್ನಿಯರು ಎಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ ಪಾರ್ವತಮ್ಮ ರವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ಪಾರ್ವತಮ್ ಮತ್ತು ಕೆಂಪರಾಜು ರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3) ನಮ್ಮ ಮುತ್ತಾತ, ತಾತ, ತಂದೆ ಹಾಗೂ ನಾವು ಮಂಗಳವಾಪೇಟೆಯಲ್ಲಿ ವಾಸವಾಗಿದ್ದೇವೆ ಎಂದರೆ ಸಾಕ್ಷಿ ನಮ್ಮ ಮುತ್ತಾತ ಮತ್ತು ತಾತ ವಂದಾರಗುಪ್ಪೆಯಲ್ಲಿ ವಾಸವಾಗಿದ್ದರು. ನನ್ನ ತಂದೆ ಮತ್ತು ನಾನು ಮಂಗಳವಾರಪೇಟೆಯಲ್ಲಿ ವಾಸವಾಗಿದ್ದೇವೆ. ಪ್ರತಿವಾದಿಗಳು ಪೌಲೀ ದೊಡ್ಡಿಯಲ್ಲಿ ವಾಸವಾಗಿದ್ದಾರೆ ಎಂದರೆ ಸಿದ್ದಮ್ಮ ಮಾತ್ರ ಪೌಲೀ ದೊಡ್ಡಿಯಲ್ಲಿ ವಾಸವಾಗಿದ್ದು ಉಳಿದವರೆಲ್ಲಾ ಸಿ.ಎಂ.ಸಿ ಲೇಔಟ್ ನಲ್ಲಿ ವಾಸವಾಗಿದ್ದಾರೆ. 1ನೇ ಪ್ರತಿವಾದಿ ಹಾಗೂ ಆತನ ಮಕ್ಕಳು 1965 ರಿಂದ ಪೌಲೀ ದೊಡ್ಡಿಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಾತ ಸಿದ್ದಯ್ಯ ಅಲಿಯಾಸ್ ಮರಿಕೆಂಪನ ಸಿದ್ದಯ್ಯ ರವರಿಗೆ ಒಟ್ಟು ಮೂರು ಕಡೆ ಪಿತ್ರಾರ್ಜಿತ ಆಸ್ತಿಗಳು ಇರುತ್ತವೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ.**
**ನ್ಯಾಯಾಲಯ, ಚನ್ನಪಟ್ಟಣ.**